ಬಿ.ಆರ್. ಉಷಾ, ಕೆನಡ
ಮಂತ್ರಿಗಳ ಮನೆಯ ನಾಯಿ ಕಳ್ಳರನ್ನು, ಭ್ರಷ್ಟರನ್ನು ಕಂಡರೆ ಬೊಗಳಲ್ಲ. ಯಾಕೆ?



ಮಾಲಿಕರಿಗೆ, ಅವರ ಮಕ್ಕಳಿಗೆ ಬೊಗಳಿದರೆ ಹೊರಹಾಕುವರೆಂಬ ತಿಳುವಳಿಕೆ.

ನೀಲಮ್ಮ ಕುಮಾರಪ್ಪ, ಲಿಂಗಸುಗೂರು
ಮನಿ ದೇವರೇ ಕಲ್ಲಾದರೆ ಮುಂದಿನ ಬದುಕೆಂಗ?
ಕಲ್ಲನ್ನು ವಿಗ್ರಹವಾಗಿಸಿ, ಮನೆಯನ್ನು ದೇಗುಲವಾಗಿಸಿದರೆ ತೀರ್ಥಪ್ರಸಾದಕ್ಕೆ ದಾರಿ ಕಾಣುತ್ತದೆ.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ
ನೆಂಟಿಗೂ ನೈಟಿಗೂ ಏನು ವ್ಯತ್ಯಾಸ?
ನೆಂಟಿ ಪಾರ್ಟಿಗಳಲ್ಲೂ ಸಲ್ಲುತ್ತದೆ.

ಟಿ.ಎಸ್. ಪ್ರತಿಭಾ, ಚಿತ್ರದುರ್ಗ
ಬೊಕ್ಕತಲೆಯವರಿಗೇಕೆ ಬುದ್ಧಿ ಜಾಸ್ತಿ?



ಕೂದ್ಲು ಉದ್ರೋರ್ಗೂ ತಲೇನ ಪರಪರ ಕರ್ಕೊಂಡು ಚಿಂತನೆಯ ಮೂಲಕ ಬುದ್ಧಿಗೆ ಸಾಣೆ ಹಿಡಿಯೋದ್ರಿಂದ.

ಪಿ. ಜಯವಂತ ಪೈ, ಕುಂದಾಪುರ
ಮಳೆಗೂ ಮಹಿಳೆಗೂ ವ್ಯತ್ಯಾಸವೇನು?
ಮಳೆ ಬಿದ್ದರೆ ವೃದ್ಧಿ; ಮಹಿಳೆ ಬಿದ್ದರೆ ಸುದ್ದಿ!

ಪಿ.ಜೆ. ರಾಘವೇಂದ್ರ, ಮೈಸೂರು
ಹನಿಟ್ರ್ಯಾಪನ್ನು ಕನ್ನಡದಲ್ಲಿ ಏನೆಂದು ಬಣ್ಣಿಸಬಹುದು?
ಮಧುಪಂಜರ.

ಜೀವಿ, ಗೊಂಡೇದಹಳ್ಳಿ
ಪೊಲೀಸರನ್ನು ಮಾವ ಎಂದು, ಠಾಣೆಯನ್ನು ಮಾವನ ಮನೆ ಎಂದು ಕರೆಯುವುದೇಕೆ?
ಸ್ವಾಗತಿಸಿ, ಫ್ರೀಯಾಗಿ ಸತ್ಕರಿಸಿ, ಮುತುವರ್ಜಿಯಿಂದ ಏರೋಪ್ಲೇನೂ ಹತ್ತಿಸುವವನು ಮಾವನೇ.

ಕೆ. ಹೊನ್ನಪ್ಪ, ಕ್ಯಾತ್ಸಂದ್ರ
ಭೂಮಿಯನ್ನು ರಕ್ಷಿಸಿ ಎಂದು ಈಗ ಬೊಬ್ಬಿರಿಯುವ ಜನ ಹಿಂದೆ ಏನು ಮಾಡುತ್ತಿದ್ದರು?
ಭೂಮಿಯನ್ನು ಭಕ್ಷಿಸಿ ಎನ್ನುತ್ತಿದ್ದರು. ಅಜೀರ್ಣವಾದಾಗಲೇ ಪಥ್ಯದ ಚಿಂತೆ.

ಜಯಲಕ್ಷ್ಮಿ ಉಪಾಧ್ಯಾಯ, ಕಂಚಾರ್ತಿ
ಮನುಷ್ಯರಿಗೆ ಸಾಯುವ ದಿನ ಮೊದಲೇ ಗೊತ್ತಾದರೆ ಹೇಗಿರುತ್ತಾರೆ?
ಸತ್ತಂತೆ.

ವಿ. ಹೇಮಂತಕುಮಾರ್, ಬೆಂಗಳೂರು
ಗುಟ್ಟು ಹೇಳುವ ನೆವದಲ್ಲಿ ಕಿವಿಯ ಹತ್ತಿರ ತುಟಿಗಳನ್ನು ತಂದವಳು ಕೆನ್ನೆಗೆ ಮುತ್ತಿಟ್ಟಳಲ್ಲ!
ಅಪ್ಪನ ಪುಟ್ಟ ಮುದ್ದು ಹೆಣ್ಣುಮಕ್ಕಳೇ ಹಾಗೆ.

ಕಾವ್ಯ ಅಬಕರ್, ಬೆಂಗಳೂರು
ಸೀರಿಯಲ್ ನೋಡೋ ಹುಚ್ಚಿಗೆ ಮೆಡಿಸಿನ್ ಇಲ್ವಾ?
ನಿಮ್ಮ ಕೈಯಲ್ಲೇ ಇದೆ. ಅದನ್ನು ರಿಮೋಟ್ ಎಂದು ಕರೆಯುತ್ತಾರೆ.

ಭಾರತೀ ಗಂಗಾಧರ್, ಬೆಂಗಳೂರು
ತುಂಬಾ ನಂಬಿಕೆ ಇರುವ ಕಡೆಯೇ ಮೋಸ ನಡೆಯುತ್ತಲ್ಲ?
ಬೆಳಕಿನ ಅತ್ತಕಡೆ ನೆರಳಿರಲೇಬೇಕಲ್ಲ! ಮೋಸ ನಂಬಿಕೆಯ ನೆರಳು.

ಅನಸೂಯ ಟಿ. ಕೇದಿಗೆಮನೆ
ಮನುಷ್ಯನು ಪ್ರಾಣಿಗಳಂತೆ ಮೂಕನಾಗಿದ್ದಿದ್ದರೆ?
ಎಂತಹ ಸುಂದರ ಕಲ್ಪನೆ! ಬ್ರೇಕಿಂಗ್ ನ್ಯೂಸ್ ಗೊಗ್ಗರಬ್ಬರವೇ ತಪ್ಪುತ್ತಿತ್ತು!

ತಲಕಾಡು ಶ್ರೀನಿಧಿ, ಬೆಂಗಳೂರು
ನೆನ್ನೆಯ ಕನಸಿನ ಮುಂದುವರಿದ ಭಾಗವನ್ನು ಇಂದು ಕಾಣಲು ಏನಾದರೂ ಉಪಾಯ?
ಸಾಧಕರು ನಿದ್ರಿಸದೆ ಕಾಣುವ ಭವಿಷ್ಯತ್ತಿನ ಕನಸುಗಳು ಹೀಗೆ ಮುಂದುವರಿಯುತ್ತವೆ.

## ವಾರದ ಪ್ರಶ್ನೆ

ಮಹಾವೀರ ಕಾಸರ, ಶಿವಮೊಗ್ಗ
ಹೆಂಡದ ಹಣದಿಂದ ನಡೆಯುವ ಸರಕಾರವನ್ನು ಕುಡುಕರ ಸರಕಾರ ಎನ್ನಬಹುದೆ?
ಆಗಾಗ್ಗೆ ಜಿಎಸ್‌ಟಿಯದೋ ಹಣದುಬ್ಬರದ್ದೋ ಸಖತ್ ಕಿಕ್ ಕೊಡುವುದರಿಂದ, ಅನ್ನಬಹುದು.

ಕೆ. ಪುರುಷೋತ್ತಮರೆಡ್ಡಿ, ಪಾವಗಡ
ಜವಾರಿ, ಕುಂದಾಪ್ರ, ಹವ್ಯಕ ಯಾವ ಭಾಷೆಯನ್ನೂ ಬಳಸದೆ ಬೆಂಗ್ಳೂರು ಭಾಷೆಯನ್ನೇ ಬಳಸ್ತೀಯಲ್ಲೋ ಬ್ರೂಟಸ್?
ವಾಹಿನಿಗಳು ಮೂಲೆಮೂಲೆಗೆ ತಲುಪಿಸಿರುವ ಬೆಂಗ್ಳೂರು ಭಾಷೆಯೇ ಎಲ್ಲೆಡೆ ಸಲ್ಲುವ ಲೋಟಸ್.

ಎಂ.ವಿ. ಉಮಾ, ಮತ್ತೂರು
ಗೊಣಗುವುದಕ್ಕೂ ಗೊರಕೆ ಹೊಡೆಯುವುದಕ್ಕೂ ಎಷ್ಟು ಸಾಮರಸ್ಯವಿದೆ?
ಸತಿಪತಿಯಷ್ಟು; ಅವನು ಗೊರಕೆ ಹೊಡೆಯುತ್ತಾನೆ, ಅವಳು ಗೊಣಗುತ್ತಾಳೆ.

ಎಂ.ಎ. ಕುಮಾರ್, ಬೆಂಗಳೂರು
ಯಾವ ವಯಸ್ಸಿನವರೆಗೆ ಹೆಂಗಸರು ಕನ್ನಡಿಯ ಮುಂದೆ ನಿಂತುಕೊಳ್ಳಲು ಇಷ್ಟಪಡುತ್ತಾರೆ?



ಮಂಡಿ ಕೈ ಕೊಡುವ ವಯಸ್ಸಿನವರೆಗೆ. ನಂತರ ನಿಲ್ಲಲಾಗದೆ ಕುಳಿತುಕೊಳ್ಳುತ್ತಾರೆ.

ಟಿ. ಜಾಗೃತ, ತುಮಕೂರು
ನೆಚ್ಚಿನ ಸುಧಾ ಪತ್ರಿಕೆಗೆ ಈ ಹೆಸರು ಹೇಗೆ ಬಂತು?
ಅಮೃತದಂತಹ ವಿಷಯಗಳ ಮೂಲಕ 'ಸುಧಾ'ರಣೆಗೆ ತೊಡಗಿದ್ದರಿಂದ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ಓಬಿರಾಯನ ಕಾಲದ್ದು ಎಂದರೇನು?
ಓಲ್ಡ್ & ಬರೀಡ್ ರಾಯನ ಕಾಲದ್ದು; ಪುರಾತನ.

■ ರಾಮ್